ಆತಂಕಿತಳಾಗಿದ್ದಳು. ಬಾಡಿ ಬೆಂಡಾದ ಮುಖ. ಅವಳ ಕಣ್ಣಂಚಲ್ಲಿ ನಿರಂತರ ನೀರು ಜಿನುಗುತ್ತಿತ್ತು. ಅವಳಿಗೆ ತನ್ನ ನೋವು, ತಳಮಳಗಳನ್ನು ಮಗಳೆದುರು ತೋರಗೊಡದಿರುವ ಬಗೆಯ ನಟನೆ ಅನಿವಾರ್ಯವಾಗಿತ್ತು. ತಪಾಸಣೆಯ ಸ್ವರೂಪಗಳನ್ನು ಕಂಡರೆ ಆ ಭೀತಿ ಸ್ವಾಭಾವಿಕ! ಯಾರದ್ದೇ ಆದರೂ ಕೈಕಾಲು ನಡುಗಿಸುವಂಥದ್ದೇ ಆಗಿತ್ತು. ಈ ಕಾಮಾಲೆ ಇಷ್ಟು ಗಂಭೀರವೆಂದು ರಾಮಗೊಂಡನಾಗಲಿ ಆತನ ಮಡದಿ ಸುನೀತಾಳಾಗಲಿ ಭಾವಿಸಿರಲಿಲ್ಲ. ಆದರೆ, ಒಂದು ಅನುಮಾನ ಮಾತ್ರ ಕುಟುಕಿ ಚುಚ್ಚಿ ಹಿಂಸಿಸುತ್ತಿತ್ತು. ಡಾ.ಸಾಖರೆ ತಮ್ಮನ್ನು ದಾರಿ ತಪ್ಪಿಸಿದ ವೈದ್ಯ. ಅವರನ್ನು ನಂಬಿ ಅವರ ಬಳಿ ಮಗಳನ್ನು ಇಷ್ಟು ದಿನ ಚಿಕಿತ್ಸೆಗೆ ಬಿಟ್ಟದ್ದೇ ತಪ್ಪು. ಇದು ತಾನು ಕೈಗೊಂಡ ಮೂರ್ಖತನದ ನಿರ್ಧಾರ. ಘನಘೋರ ತಪ್ಪು ಎಂದು ಅಪರಾಧಿ ಮನವು ರಾಮಗೊಂಡನನ್ನು ಚುಚ್ಚಿ ಚುಚ್ಚಿ ಕಾಡುತ್ತಿತ್ತು. ಹರಿತ ಭಲ್ಲೆಯಿಂದ ಇರಿದು ಕೊಲ್ಲುತ್ತಿತ್ತು. ಇವತ್ತು ಕಡಿಮೆಯಾಗಬಹುದು. ನಾಳೆ ಕಡಿಮೆ ಆಗುತ್ತದೆಂದು ಕಾದರು. ಹೀಗೆ ಕಾಯುವುದು ತಪ್ಪಾಗಿರಲೂ ಸಾಕು. ಆದರೆ ಅವರು ನಂಬಿಸಿ ಅಡ್ಮಿಟ್ ಮಾಡಿಕೊಂಡು ದುಡ್ಡು ಸುಲಿದರು. ಏನೆಲ್ಲ ರಕ್ತ ತಪಾಸಣೆಗಳನ್ನು ನಡೆಸಿದರು. ಹಾಗೆ ಹೆಪಟೈಟಿಸ್ 'ಎ' ಮಾರಣಾಂತಿಕವಲ್ಲ ಎಂಬುದು ಸರ್ವವಿದಿತ. ಆದರೂ ಅಟೋ ಇಮ್ಯೂನ್ ಹೆಪಟೈಟಿಸ್ 'ಎ' ಎಂದು ತಿಳಿಯಲು ಹೈದರಾಬಾದ್, ಪುಣೆ, ಮುಂಬೈಗಳಿಗೆ ಸವಿತಾಳ ರಕ್ತವನ್ನು ಲ್ಯಾಬ್‌ಗೆ ಕಳಿಸಿದರು. ರೋಗಿಯ ಜೀವಕಣಗಳು ನಾಶವಾಗುವವೋ ಇಲ್ಲವೋ ಎಂಬುದರ ಪರೀಕ್ಷೆ ಆ ವರದಿಗಳು ಬರುವ ನಿರೀಕ್ಷೆಯ ಕಾವನ್ನು ಕಳೆಯುವುದಿದೆಯಲ್ಲ! ಓಹ್ ದೇವರೇ, ಅದಕ್ಕಿಂತ ಘನಘೋರ ಶಿಕ್ಷೆ ಇನ್ನೊಂದಿಲ್ಲ. ಪ್ರತಿ ಕ್ಷಣವೂ ಯುಗದಂತೆ ಭಾಸ. ಕಾಯುವ ಸರ್ವತೋ ಪರಿ ಹಿಂಸೆ ಯಾರಿಗೂ ಬರದಿರಲಿ ದೇವರೇ ಎಂದು ಮನಸ್ಸು ಹಲುಬುತ್ತಿತ್ತು. ಹಗಲು- ರಾತ್ರಿ ಒಂದೇ ಅನಿಸತೊಡಗಿತು. ಕಣ್ಣಿನ ರೆಪ್ಪೆಗಳು ಮುಚ್ಚುತ್ತಿಲ್ಲ. ಇರುಳಿನಲ್ಲಿ ನಿದ್ರೆ ಮಟಾಮಾಯ! ಬರೇ ಕಪೋಲಕಲ್ಪಿತ ಚಿತ್ರಗಳು ಮನಪಟದಲ್ಲಿ. ರಾಮಗೊಂಡ ಮತ್ತು ಸುನೀತಾರಿಗೆ ಜೀವ ಬಾಯಿಗೆ ಬಂದಂಥ ಅನುಭವ.

ಒಂದು ಕಾಲು ತಿಂಗಳು ಕಳೆದವು. ಸಾಖರೆಯವರ ಎಲ್ಲ ಪ್ರಯೋಗಗಳು ಕೈಚೆಲ್ಲಿದವು. ಡಾ. ಸಾಖರೆ ನಿಧಾನಕ್ಕೆ ಸೋಲೊಪ್ಪಿದರು. ಅಷ್ಟೊತ್ತಿಗೆ ಸವಿತಾಳ ರೋಗ ನಿರೋಧಕತೆ ಕಮ್ಮಿ ಆಗಿತ್ತು. ಪೌಷ್ಟಿಕ ಆಹಾರದ ಕೊರತೆಯಿಂದ ನಿಶಕ್ತಳಾಗಿದ್ದಳು. ತೂಕ ಇಳಿದಿತ್ತು. ಮುಖ ಬಾಡಿ ಒಣಗಿದ ಎಲೆಯಂತಾಗಿತ್ತು. ದಷ್ಟಪುಷ್ಟ ಹುಡುಗಿ ಮೈ ಮುಟ್ಟದರೆ ಎಲುಬು ಹತ್ತುತ್ತಿತ್ತು. ಹಳದಿ ಬಣ್ಣದಲ್ಲಿ ಅದ್ದಿ ತೆಗೆದಂತಿರುವ ಕಂಗಳು ಗಾಬರಿ ಹುಟ್ಟಿಸುತ್ತಿದ್ದವು. ಹಾರರ್ ಚಿತ್ರದ ವಿಕಲ ಪಿಶಾಚಿಯಂತೆ. ಕೇವಲ ಮಜ್ಜಿಗೆ ಅನ್ನ, ಬೇಳೆ ಅನ್ನ ತಿಂದು, ಕಬ್ಬಿನ ಹಾಲು ಕುಡಿದು; ಎಲ್ಲಿಯ ಶಕ್ತಿಯನ್ನು ತಂದು ಕ್ರೋಢೀಕರಿಸಿಕೊಳ್ಳುವುದು? ಡಾ.ಸಾಖರೆಯ ಈ ಕಾಮನ್‌ಸೆನ್ಸ್ ಎಲ್ಲಿ ದನ ಕಾಯಲು ಹೋಗಿತ್ತೆ? ರಾಮಗೊಂಡನಿಗೆ ತನ್ನ ಮೇಲೆಯೇ ಕೋಪ ಉಕ್ಕಿ ಬರುತ್ತಿತ್ತು.

* * *

ಬೆಂಗಳೂರೆಂಬ ಬೃಹತ್ ಶಹರು ತನ್ನ ಉದರದೊಳಗೆ ಕೋಟ್ಯಂತರ ಥರಾವರಿ ಉದ್ಯೋಗಿಗಳನ್ನು ಕಾಂಗರೂ ತನ್ನ ಮರಿಗಳನ್ನು ಉದರಚೀಲದೊಳಗೆ ಇಟ್ಟುಕೊಂಡಂತೆ ತುರುಕಿ ಕೊಂಡಿದೆ. ಸುಡು ಬೇಸಿಗೆ. ಈ ಋತುವು ಅಸಂಖ್ಯ ವೈರಾಣುಗಳನ್ನು ಪಸರಿಸಿದೆ. ಜಲ, ಆಹಾರ ಮತ್ತು ವಾಯು ಅದರ ಮುಖ್ಯ ವಾಹಕ. ಸವಿತಾ ವೀಕೆಂಡ್ ರಜೆಗೆಂದು ಬಂದಿದ್ದಳು. ಆಗ ಇದನ್ನು ಕರುಳಿಗೆ ಹಚ್ಚಿಕೊಂಡೇ ಆಗಮಿಸಿದ್ದಳು. ಅವಳಕ್ಕ ಅಮೃತಾ ಬಂದಿರಲಿಲ್ಲ. ರಜೆ ದೊರಕಿರಲಿಲ್ಲ. ರವಿವಾರ ರಾತ್ರಿಯ ಟ್ರೇನಿಗೆ ಮರಳಿ ಬೆಂಗಳೂರು ಹೊರಡಬೇಕಿದ್ದ ಸವಿತಾಳಿಗೆ ಸಂಜೆಗೆ ಜ್ವರ ಬಂದಿತ್ತು. ಆಗ ಯಾವುದಕ್ಕೂ ಒಮ್ಮೆ ಡಾಕ್ಟರ್‌ಗೆ ತೋರಿಸಿದರಾಯಿತೆಂದು ರಾಮಗೊಂಡ, ಸುನೀತಾ ಯೋಚಿಸಿದರು. ಡಾ. ಸಾಖರೆ ಅವರ ಆಸ್ಪತ್ರೆಗೆ ಕರೆದೊಯ್ದರು. ಆಗ ಅನುಮಾನಗೊಂಡು ಸಾಖರೆ ಎಲ್‌ಎಫ್‌ಟಿ ರಕ್ತ ಪರೀಕ್ಷೆ ಮಾಡಿಸಿದರು. ಹೆಪಟೈಟಿಸ್ 'ಎ' ಡೈಗ್ನೋಜ್ ಆಯಿತು. ಬೆಂಗಳೂರು ಪಯಣ ರದ್ದು. ಟ್ರೀಟ್‌ಮೇಂಟ್ ಮತ್ತು ಆಹಾರದ ಪಥ್ಯ ಆರಂಭ. ಡೇ ಕೇರ್ ಟ್ರೀಟ್‌ಮೆಂಟ್ ಎಂಬ ಪರಿಕಲ್ಪನೆಯದ್ದು.

ದಿನಗಳು, ವಾರಗಳು ಕಳೆದವು. ಕಾಮಾಲೆಗೆ